# ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

**ಸಾರ್ವಜನಿಕ ಸಂಪರ್ಕ ವಿಭಾಗ, ನರಸಿಂಹರಾಜ ವೃತ್ತ, ಬೆಂಗಳೂರು-560 002**

***ಪತ್ರಿಕಾ ಪ್ರಕಟಣೆ*** **ದಿನಾಂಕ: 05.09.2011**

## ***ನಾಮಕರಣ ನಿರ್ಣಯಕ್ಕೆ ಸಾರ್ವಜನಿಕರ ಆಕ್ಷೇಪಣೆಗಳ ಆಹ್ವಾನ***

ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ವಾರ್ಡ್ ಸಂಖ್ಯೆ: 179, ಶಾಕಾಂಬರಿನಗರ ವಿಭಾಗದ ವ್ಯಾಪ್ತಿಯಲ್ಲಿ ಬರುವ ಜೆ.ಪಿ. ನಗರ 1ನೇ ಹಂತ, ವೈಶ್ಯ ಬ್ಯಾಂಕ್ ಕಾಲೋನಿ, 4ನೇ ಅಡ್ಡರಸ್ತೆಯಲ್ಲಿರುವ 33ನೇ ಮುಖ್ಯರಸ್ತೆಗೆ ***"ಶ್ರೀ ರಾಮದೇವಾಲಯ ರಸ್ತೆ"*** ಎಂದು ನಾಮಕರಣ ಮಾಡಲು ದಿನಾಂಕ: 28.07.2011 ರಂದು ನಡೆದ ಪಾಲಿಕೆ ಸಭೆಯಲ್ಲಿ ತೀರ್ಮಾನಿಸಲಾಗಿದೆ.

ಅದೇ ರೀತಿ ವಾರ್ಡ್ ನಂ. 125, 2ನೇ ಮುಖ್ಯರಸ್ತೆ, ಮಾರೇನಹಳ್ಳಿ ಬಿನ್ನಿ ಬಡಾವಣೆ 1ನೇ ಹಂತದಲ್ಲಿರುವ ಉದ್ಯಾನವನಕ್ಕೆ ***"ಬಿನ್ನಿ ಉದ್ಯಾನವನ"*** ಎಂದು ನಾಮಕರಣ ಮಾಡಲು ದಿನಾಂಕ: 28.07.2011 ರಂದು ನಡೆದ ಪಾಲಿಕೆ ಸಭೆಯಲ್ಲಿ ತೀರ್ಮಾನಿಸಲಾಗಿದೆ.

ಇದಲ್ಲದೇ ವಾರ್ಡ್ ನಂ.154 ರ ವ್ಯಾಪ್ತಿಯಲ್ಲಿ ಬರುವ ನರಸಿಂಹರಾಜ ಕಾಲೋನಿ 2ನೇ ಮುಖ್ಯರಸ್ತೆಗೆ ***"ಡಾ|| ಸಿ. ಅಶ್ವಥ್"*** ರವರ ಹೆಸರನ್ನು ನಾಮಕರಣ ಮಾಡಲು ದಿನಾಂಕ: 28.06.2011 ರಂದು ನಡೆದ ಪಾಲಿಕೆ ಸಭೆಯಲ್ಲಿ ತೀರ್ಮಾನಿಸಲಾಗಿದೆ.

ಅದೇ ರೀತಿ ವಾರ್ಡ್ ನಂ.56 ರ ವ್ಯಾಪ್ತಿಯಲ್ಲಿ ಬರುವ ಪೈ ಲೇಔಟ್ 1ನೇ ಮುಖ್ಯರಸ್ತೆಗೆ (ಹಳೆ ಮದ್ರಾಸ್ ರಸ್ತೆಯಿಂದ ವಿವೇಕಾನಂದ ಬೀದಿವರೆಗಿನ ರಸ್ತೆಗೆ) ***"ಶ್ರೀ ಭಗತ್ ಸಿಂಗ್ 1ನೇ ಮುಖ್ಯರಸ್ತೆ"*** ಎಂದು ನಾಮಕರಣ ಮಾಡಲು ದಿನಾಂಕ: 28.07.2011 ರಂದು ನಡೆದ ಪಾಲಿಕೆ ಸಭೆಯಲ್ಲಿ ತೀರ್ಮಾನಿಸಲಾಗಿದೆ.

ಅದೇ ರೀತಿ ವಾರ್ಡ್ ನಂ.56 ರ ವ್ಯಾಪ್ತಿಯಲ್ಲಿ ಬರುವ ಪೈ ಲೇಔಟ್ 2ನೇ ಮುಖ್ಯರಸ್ತೆಗೆ (ಹಳೆ ಮದ್ರಾಸ್ ರಸ್ತೆಯಿಂದ ವಿವೇಕಾನಂದ ಬೀದಿವರೆಗಿನ ರಸ್ತೆಗೆ) ***"ಶ್ರೀ ಭಗತ್ ಸಿಂಗ್ 2ನೇ ಮುಖ್ಯರಸ್ತೆ"*** ಎಂದು ನಾಮಕರಣ ಮಾಡಲು ದಿನಾಂಕ: 28.07.2011 ರಂದು ನಡೆದ ಪಾಲಿಕೆ ಸಭೆಯಲ್ಲಿ ತೀರ್ಮಾನಿಸಲಾಗಿದೆ.

ಇದಲ್ಲದೇ ಜೆ.ಪಿ.ನಗರ 7ನೇ ಹಂತದ ಬಡಾವಣೆಗೆ ***"ದಿವಂಗತ ಶ್ರೀ ವಿ.ಎಸ್. ಕೃಷ್ಣಯ್ಯರ್"*** ರವರ ಹೆಸರನ್ನು ನಾಮಕರಣ ಮಾಡಲು ದಿನಾಂಕ: 28.07.2011 ರಂದು ನಡೆದ ಪಾಲಿಕೆ ಸಭೆಯಲ್ಲಿ ತೀರ್ಮಾನಿಸಲಾಗಿದೆ.

ಅದೇ ರೀತಿ ವಾರ್ಡ್ ನಂ.41 ರ ವ್ಯಾಪ್ತಿಯಲ್ಲಿ ಬರುವ ಎನ್.ಟಿ.ಟಿ.ಎಫ್. ವೃತ್ತಕ್ಕೆ ಕರ್ನಾಟಕ ನಾಡಿನ ಪ್ರಸಿದ್ಧ ಜೀವನದಿಯಾದ ***"ಕಾವೇರಿ ವೃತ್ತ"*** ಹಾಗೂ ಟಿ.ವಿ.ಎಸ್. ವೃತ್ತಕ್ಕೆ ***"ಕುವೆಂಪು ವೃತ್ತ"*** ಎಂದು ನಾಮಕರಣ ಮಾಡಲು ದಿನಾಂಕ: 28.07.2011 ರಂದು ನಡೆದ ಪಾಲಿಕೆ ಸಭೆಯಲ್ಲಿ ತೀರ್ಮಾನಿಸಲಾಗಿದೆ.

ಅದೇ ರೀತಿ ವಾರ್ಡ್ ನಂ.56 ರ ವ್ಯಾಪ್ತಿಯಲ್ಲಿ ಬರುವ ಬಿ ನಾರಾಯಣಪುರ ಬಂಡೆ ಪ್ರದೇಶಕ್ಕೆ ***"ಹನುಮಾನ್ ಜಂಕ್ಷನ್"*** ಎಂದು ನಾಮಕರಣ ಮಾಡಲು ದಿನಾಂಕ: 28.07.2011 ರಂದು ನಡೆದ ಪಾಲಿಕೆ ಸಭೆಯಲ್ಲಿ ತೀರ್ಮಾನಿಸಲಾಗಿದೆ.

ಇದಲ್ಲದೇ ವಾರ್ಡ್ ನಂ.103 ರ ವ್ಯಾಪ್ತಿಯಲ್ಲಿ ಬರುವ ರಂಗನಾಥಪುರ 1ನೇ ಮುಖ್ಯರಸ್ತೆಗೆ (ಮಾಗಡಿ ಮುಖ್ಯರಸ್ತೆಯಿಂದ 60 ಅಡಿ ರಸ್ತೆ ಪಟ್ಟೇಗಾರಪಾಳ್ಯ ಸೇರುವ ರಸ್ತೆವರೆಗೆ) ***"ಜಮೀನ್ದಾರರಾದ ದಿವಂಗತ ಶ್ರೀಮತಿ ಕೋಮಲಮ್ಮ ರಸ್ತೆ"*** ಎಂದು ನಾಮಕರಣ ಮಾಡಲು ದಿನಾಂಕ: 28.07.2011 ರಂದು ನಡೆದ ಪಾಲಿಕೆ ಸಭೆಯಲ್ಲಿ ತೀರ್ಮಾನಿಸಲಾಗಿದೆ.

ಅದೇ ರೀತಿ ವಾರ್ಡ್ ನಂ.56 ರ ವ್ಯಾಪ್ತಿಯಲ್ಲಿ ಬರುವ ಕರುಮಾರಿಯಮ್ಮ ಟೆಂಪಲ್‌ನಿಂದ ಮಹದೇವಪುರ ವರ್ತುಲ ರಸ್ತೆವರೆಗೆ ***"ಶ್ರೀ ವೀರ ಸಾವರ್ಕರ್ ಮುಖ್ಯರಸ್ತೆ"*** ಎಂದು ನಾಮಕರಣ ಮಾಡಲು ದಿನಾಂಕ: 28.07.2011 ರಂದು ನಡೆದ ಪಾಲಿಕೆ ಸಭೆಯಲ್ಲಿ ತೀರ್ಮಾನಿಸಲಾಗಿದೆ.

ಇದಲ್ಲದೇ ವಾರ್ಡ್ ನಂ.176 ರ ವ್ಯಾಪ್ತಿಯಲ್ಲಿ ಬರುವ ಬಿ.ಟಿ.ಎಂ. ಬಡಾವಣೆ 2ನೇ ಹಂತ ಇ.ಡಬ್ಲ್ಯೂ.ಎಸ್. ಬಡಾವಣೆಗೆ ***"ಶ್ರೀ ಆರ್. ಗುಂಡೂರಾವ್ ಬಡಾವಣೆ"*** ಎಂದು ನಾಮಕರಣ ಮಾಡಲು ದಿನಾಂಕ: 28.07.2011 ರಂದು ನಡೆದ ಪಾಲಿಕೆ ಸಭೆಯಲ್ಲಿ ತೀರ್ಮಾನಿಸಲಾಗಿದೆ.

ಅದೇ ರೀತಿ ವಾರ್ಡ್ ನಂ.131 ರ ವ್ಯಾಪ್ತಿಯಲ್ಲಿ ಬರುವ ಗಂಗೊಂಡನಹಳ್ಳಿ 4ನೇ ಅಡ್ಡರಸ್ತೆಗೆ ಮತ್ತು ವೀರಾಂಜನೇಯ ದೇವಸ್ಥಾನ ಬಳಿ ಇರುವ ವೃತ್ತಕ್ಕೆ ಸಮಾಜ ಸೇವಕರಾದ ***"ದಿವಂಗತ ಶ್ರೀ ಸಿ. ಚೆಲುವಯ್ಯ"*** ರವರ ಹೆಸರನ್ನು ನಾಮಕರಣ ಮಾಡಲು ದಿನಾಂಕ: 28.07.2011 ರಂದು ನಡೆದ ಪಾಲಿಕೆ ಸಭೆಯಲ್ಲಿ ತೀರ್ಮಾನಿಸಲಾಗಿದೆ.

ಆದುದರಿಂದ ಈ ಮೇಲ್ಕಂಡ 12 ವಿವಿಧ ನಾಮಕರಣಗಳಿಗೆ ಸಂಬಂಧಿಸಿದಂತೆ ಸಾರ್ವಜನಿಕ ಆಕ್ಷೇಪಣೆಗಳು ಇದ್ದಲ್ಲಿ, ಈ ಪತ್ರಿಕಾ ಪ್ರಕಟಣೆ ಹೊರಡಿಸಲಾದ ದಿನಾಂಕದಿಂದ 30 ದಿನಗಳ ಒಳಗಾಗಿ ಆಯುಕ್ತರು, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ, ನರಸಿಂಹರಾಜ ಚೌಕ, ಬೆಂಗಳೂರು-02, ಇವರಿಗೆ ಆಕ್ಷೇಪಣೆಗಳನ್ನು ಸಲ್ಲಿಸಲು ಕೋರಲಾಗಿದೆ.

**ಸಾರ್ವಜನಿಕ ಸಂಪರ್ಕಾಧಿಕಾರಿ**